


ಪಂಕ್ಚರ್ ಹಾಕುತ್ತಿದ್ದೆ. ಚಿಕ್ಕ ಹುಡುಗಿಯಾಗಿದ್ದಾಗಿನಿಂದ ಅಲ್ಲಿಯೇ ಇರುತ್ತಿದ್ದೆನಲ್ಲ. ಪಂಕ್ಚರ್ ಹಾಕುವುದನ್ನು ಸುಲಭವಾಗಿ ಕಲಿತುಕೊಂಡೆ. ನನಗೆ ಅದರಿಂದ ಹೆಮ್ಮೆಯೂ ಉಂಟು' ಎಂದರು ಕುಸುಮಾ.

'ಕಾಲೇಜಿನಲ್ಲಿ ಡಿಸೆಂಬರ್‌ನಿಂದ ಫೆಬ್ರುವರಿವರೆಗೆ ಪ್ರತಿ ವಾರವೂ ಪ್ರಿಪರೇಟರಿ ಪರೀಕ್ಷೆ ನಡೆದಿತ್ತು. ವಾರಕ್ಕೊಮ್ಮೆ ಎಲ್ಲ ವಿಷಯಗಳ ಪರೀಕ್ಷೆ ಬರೆಯುವುದು ಕಷ್ಟವಾಗಿರಲಿಲ್ಲ. ಏಕೆಂದರೆ ಮಾರ್ಚ್‌ನಿಂದ ಡಿಸೆಂಬರ್‌ವರೆಗೆ ನಮಗೆ ಹಾಗೆ ಪಾಠ ಮಾಡುತ್ತಿದ್ದರು. ಗೊತ್ತಾಗಲಿಲ್ಲ ಎಂದರೆ ಮತ್ತೊಮ್ಮೆ ಹೇಳುತ್ತಿದ್ದರು. ಬರೆಸುತ್ತಿದ್ದರು, ಓದಿದ್ದನ್ನೇ ಓದಬೇಕು. ಬರೆದಿದ್ದನ್ನೇ ಮತ್ತೆ ಮತ್ತೆ ಬರೆಯಬೇಕು ಅಷ್ಟೇ.'

'ಹಾಗೆಂದು ಎಲ್ಲವನ್ನೂ ಓದಲೇಬೇಕು ಎಂದಿಲ್ಲ. ಪ್ರಶ್ನೆಪತ್ರಿಕೆಗಳನ್ನು ಬಿಡಿಸಿದ್ದರೆ ಯಾವ ಪಾಠವನ್ನು ಎಷ್ಟು, ಹೇಗೆ ಓದಬೇಕು ಎಂದು ಗೊತ್ತಾಗಿಬಿಡುತ್ತದೆ. ಇಲ್ಲಿ ಹಾರ್ಡ್ ವರ್ಕ್ ಎಷ್ಟು ಮುಖ್ಯವೋ, ಸ್ಮಾರ್ಟ್ ವರ್ಕ್ ಕೂಡ ಅಷ್ಟೇ ಮುಖ್ಯ. ಉದ್ದುದ್ದ ಓದಿಕೊಂಡು ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಅರ್ಥವಾಗುವಂಥದ್ದು, ಅಂಕಗಳಿಕೆಗೆ ನೆರವಾಗುವಂಥದ್ದನ್ನು ಓದಬೇಕು' ಇದು ಕುಸುಮಾ ಅವರ ಖಚಿತ ಮಾತು.

'ಕನ್ನಡ ಮೀಡಿಯಂನಲ್ಲಿ ಓದುವವರು ದಡ್ಡರು ಎಂಬುದೆಲ್ಲ ಸುಳ್ಳು. ಕನ್ನಡ–ಇಂಗ್ಲಿಷ್ ಮೀಡಿಯಂ ಎಲ್ಲಾ ಒಂದೇ. ಮೀಡಿಯಂ ಯಾವುದೇ ಇದ್ದರೂ, ನಮ್ಮ ಉಳಿವಿಗಾಗಿ ನಾವು ಹೇಗೆ ಪ್ರಯತ್ನಿಸುತ್ತೇವೆ ಎಂಬುದೇ ಮುಖ್ಯ. ಕನ್ನಡ ಮೀಡಿಯಂನವರು ಇಂಗ್ಲಿಷ್ ಅನ್ನು ಕಷ್ಟಪಟ್ಟಾದರೂ ಕಲಿಯುತ್ತೇವೆ. ಆದರೆ ಇಂಗ್ಲಿಷ್ ಮೀಡಿಯಂನಲ್ಲೇ ಓದಿಕೊಂಡು ಬಂದವರಿಗೆ ಕನ್ನಡ ಕಲಿಯಲು ಆಗುವುದಿಲ್ಲ. ಹಾಗೆ ಎಷ್ಟೋ ಮಂದಿ ಫೇಲ್ ಕೂಡ ಆಗುತ್ತಾರೆ' ಎಂಬ ಒಳನೋಟವೂ ಕುಸುಮಾ ಅವರಲ್ಲಿದೆ.

**ಪ್ರತಿಕ್ರಿಯಿಸಿ:** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in



## ನಮ್ಮದು ಇಡೀ ವರ್ಷದ ಶ್ರಮ

'ಯಾವುದೇ ಕಾಲೇಜು ಸುಖಾಸುಮ್ಮನೇ ರ‍್ಯಾಂಕ್ ಗಳಿಸಲು ಆಗುವುದಿಲ್ಲ. ನಮ್ಮದಂತೂ ಇಡೀ ವರ್ಷದ ಶ್ರಮ. ಇದು ಒಂದು ಶೈಕ್ಷಣಿಕ ವ್ರತ' ಎನ್ನುತ್ತಾರೆ ಕೊಟ್ಟೂರಿನ 'ಇಂದು' ಕಾಲೇಜಿನ ಪ್ರಾಂಶುಪಾಲ ವೀರಭದ್ರಪ್ಪ.

'ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕಾದರೆ ಉಪನ್ಯಾಸಕರು ಅವರಿಗಿಂತ ಮೊದಲೇ ಸಜ್ಜಾಗಿರಬೇಕು. ನೂರಕ್ಕೆ ನೂರರಷ್ಟು ಬದ್ಧತೆ ಇರಲೇಬೇಕು. ಪರೀಕ್ಷೆಯ ವ್ಯವಸ್ಥೆಯಲ್ಲಿ ಮೊದಲಿಗರಾಗಿ ನಿಲ್ಲಬೇಕಾದರೆ ವ್ಯವಸ್ಥೆಯ ಎಲ್ಲ ಭಾಗೀದಾರರೂ ತಮ್ಮ ಪಾಲಿನ ಕೊಡುಗೆಯನ್ನು ನೀಡಬೇಕು. ವಿದ್ಯಾರ್ಥಿಗಳು, ಪೋಷಕರು ಮತ್ತು ಉಪನ್ಯಾಸಕರು – ಈ ತ್ರಿವಳಿ ಪಾಲುದಾರಿಕೆಯ ಬಗ್ಗೆ ನಮ್ಮ ಕಾಲೇಜು ಸದಾ ಜಾಗ್ರತವಾಗಿರುತ್ತದೆ. ಪೋಷಕರೊಂದಿಗೆ ಚರ್ಚಿಸುತ್ತೇವೆ. ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಕಲಿಕೆಯ ಮಟ್ಟದ ಬಗ್ಗೆ ವಿವರಿಸುತ್ತೇವೆ. ಬೋಧನೆಯ ಕುರಿತು ಉಪನ್ಯಾಸಕರೊಂದಿಗೆ ನಿರಂತರ ಸಭೆಗಳು ನಡೆಯುತ್ತಲೇ ಇರುತ್ತವೆ' ಎಂದರು.

'ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಬೇಕೆಂದರೆ ಉತ್ತಮವಾಗಿ ಉತ್ತರಗಳನ್ನು ಬರೆಯಬೇಕು. ಪ್ರಶ್ನೆ ಮತ್ತು ಉತ್ತರ ಕೇಂದ್ರಿತ ಪೂರ್ವಸಿದ್ಧತೆ ನಮ್ಮ ಕಾಲೇಜಿನಲ್ಲಿ ಇತರೆ ಕಾಲೇಜುಗಳಿಗಿಂತಲೂ ಹೆಚ್ಚಿದೆ. ಇಡೀ ವರ್ಷದಲ್ಲಿ ಹತ್ತು ಪೂರ್ವಸಿದ್ಧತೆಗಳನ್ನು ಬಹಳ ಪರಿಶ್ರಮಪಟ್ಟು ನಡೆಸುತ್ತೇವೆ.' ಎಂದು ತಮ್ಮ ಪ್ರಯತ್ನಗಳ ಕಡೆಗೆ ಬೆಳಕು ಚೆಲ್ಲಿದರು.

ಮಾರ್ಚ್‌ನಿಂದ ಶುರುವಾಗಿ ಡಿಸೆಂಬರ್‌ವರೆಗೆ ಪಠ್ಯಕ್ರಮ ಪೂರ್ಣಗೊಳ್ಳುತ್ತದೆ. ನಂತರ ಫೆಬ್ರುವರಿವರೆಗೆ ಪ್ರತಿ ವಾರವೂ ಪೂರ್ವಸಿದ್ಧತೆ ಪರೀಕ್ಷೆಗಳಿರುತ್ತವೆ. 'ಯಾವ ಪ್ರಶ್ನೆ ಕೊಟ್ಟರೂ ಉತ್ತರ ಬರೆಯುವ ಸಾಮರ್ಥ್ಯ ನಮ್ಮ ವಿದ್ಯಾರ್ಥಿಗಳಲ್ಲಿರುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.